ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿನಾಂಕಃ 11.12.2025.

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲುಃ ಪಿರ್ಯಾದಿ ಪರ ಶ್ರೀ ಆರ್ ಎಂ ಜಿ ವಕೀಲರಿಂದಃ</u>

ನಿ.ಪಿ.1 ಚೆಕ್ ಮತ್ತು ಅದರ ಮೇಲಿರುವ ಸಹಿ ನನ್ನದೇ. ದೊಡ್ಡಬಳ್ಳಾಪುರ ತಾಲ್ಲೂಕು, ಲಿಂಗನಹಳ್ಳಿ ಗ್ರಾಮದ ಸ.ನಂ.279/4 ರ 33 ಗುಂಟೆ ಜಮೀನು ನನಗೆ ಸೇರಿದ್ದಾಗಿದೆ. ಪಿರ್ಯಾದಿದಾರರು ನನಗೆ ಪರಿಚಯ ಇರುವುದಿಲ್ಲ. ನಾನು ದಿಃ18.08.2016 ರಂದು ನಾನು ಮತ್ತು ನನ್ನ ತಾಯಿ ಲಿಂಗನಹಳ್ಳಿ ಗ್ರಾಮದ ಸ.ನಂ.279/4 ರ 33 ಗುಂಟೆ ಜಮೀನನ್ನು 30 ಲಕ್ಷಕ್ಕೆ ಮಾರಾಟ ಮಾಡವುದಾಗಿ ಒಪ್ಪಿಕೊಂಡು ಕ್ರಯದ ಕರಾರು ಪತ್ರ ಬರೆದುಕೊಟ್ಟಿರುತ್ತೇವೆಂದರೆ ಸರಿಯಲ್ಲ. ಸದರಿ ನೋಂದಾಯಿತವಲ್ಲದ ಕ್ರಯದ ಕರಾರು ಪತ್ರವನ್ನು ತೋರಿಸಲಾಗಿ, ಅದರಲ್ಲಿರುವ ಸಹಿ ತಮ್ಮದಲ್ಲವೆಂದು ಸಾಕ್ಷಿ ನುಡಿಯುತ್ತಾರೆ.

2. ಸ.ನಂ.279/4 ರ 33 ಗುಂಟೆ ಜಮೀನಿನ ಮೇಲೆ 03 ಸಿವಿಲ್ ವ್ಯಾಜ್ಯಗಳು ಇರ್ತ್ಯರ್ಥಕ್ಕಾಗಿ ಬಾಕಿ ಇರುತ್ತವೆಂದರೆ ಸರಿಯಲ್ಲ. ನಿ.ಡಿ.1 ರಲ್ಲಿ ನ್ಯಾಯಾಲಯದ ಆದೇಶದ ಮೇರೆಗೆ ತಡೆಯಾಜ್ಞೆ ಇದೆ ಎಂದರೆ, ಸಾಕ್ಷಿ ಸದರಿ ದಾವೆ ಕಳೆದ ವರ್ಷ ಇತ್ಯರ್ಥವಾಗಿರುತ್ತದೆಂದು ನುಡಿಯುತ್ತಾರೆ. 2016-17 ರ ಕಾಲಕ್ಕೆ ದಾವೆ ಬಾಕಿ ಇತ್ತು ಎಂದರೆ ಸರಿ. 2017 ನೇ ಸಾಲಿನಲ್ಲಿ ಸ.ನಂ.279/4 ರ ಸಂಬಂಧ ಸಿವಿಲ್ ವ್ಯಾಜ್ಯ ಬಾಕಿ ಇದ್ದರಿಂದ, ಕ್ರಯದ ಕರಾರನ್ನು ರದ್ದು ಪಡಿಸಲು ದೇವನಹಳ್ಳಿಯ ನಂಜೇಗೌಡರು ಮತ್ತು ನಮ್ಮ ಗ್ರಾಮದವರು ಪಂಚಾಯ್ತಿ ಮಾಡಿ, ದಿಃ18.08.2016 ರ ಕ್ರಯದ ಕರಾರಿನಡಿ ಮುಂಗಡವಾಗಿ ಪಾವತಿಸಿದ ಹಣವನ್ನು ವಾಪಸ್ಸು ನೀಡಲು ತೀರ್ಮಾನವಾಗಿ, ಸದರಿ ತೀರ್ಮಾನದಂತೆ ದಿಃ18.01.2018 ರಂದು ಚೆಕ್ ನಂ.001262 ಆಕ್ಸಿಸ್ ಬ್ಯಾಂಕ್, ದೊಡ್ಡಬಳ್ಳಾಪುರ ಶಾಖೆಗೆ ಸೇರಿದ ಚೆಕ್ಕನ್ನು ಪಿರ್ಯಾದುದಾರರಿಗೆ ನಾನು ನೀಡಿದೆ ಎಂದರೆ ಸರಿಯಲ್ಲ. ಸದರಿ ಚೆಕ್ಕನ್ನು ಪಿರ್ಯಾದುದಾರರು ಹಣ ನಗದೀಕರಣಕ್ಕಾಗಿ ಬ್ಯಾಂಕ್ ಗೆ ಹಾಜರುಪಡಿಸಿದಾಗ, ಸದರಿ ಚೆಕ್ ಅಮಾನ್ಯಗೊಂಡ ಕಾರಣ ದೊಡ್ಡಬಳ್ಳಾಪುರ ಮಾನ್ಯ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ಖಾಸಗಿ ಪಿರ್ಯಾದು ದಾಖಲಿಸಿದರು ಎಂದರೆ ನನಗೆ ಗೊತ್ತಿಲ್ಲ.

ಪಿರ್ಯಾದುದಾರರು ದಾಖಲಿಸಿದ ಪಿರ್ಯಾದಿನ ಅರ್ಜಿ ಮತ್ತು ರೋಜುನಾಮೆಯ ದೃಢೀಕೃತ ನಕಲನ್ನು ನಿ.ಡಿ.3 ಮತ್ತು 4 ರಂತೆ ನಾನೇ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆಂದರೆ ಸರಿ.

3. 2019 ರಿಂದ 2022 ರವರೆಗೆ ಕೋವಿಡ್-19 ಸಾಂಕ್ರಾಮಿಕ ರೋಗ ಇದ್ದುದ್ದರಿಂದ ನ್ಯಾಯಾಲಯಕ್ಕೆ ಕಕ್ಷಿದಾರರು ಸರಿಯಾಗಿ ಹಾಜರಾಗುತ್ತಿರಲಿಲ್ಲ ಎಂದರೆ ಸರಿ. ಕೋವಿಡ್-19 ಸಾಂಕ್ರಾಮಿಕ ರೋಗದ ಸಮಯದಲ್ಲಿ ನನಗೆ ಹಣ ಪಾವತಿಸಲು ಸಾಧ್ಯವಾಗದೇ ಇದ್ದುದ್ದರಿಂದ, ದಿಃ01.09.2021 ರಂದು ನಾನು, ಪಿರ್ಯಾದುದಾರರು, ದೇವನಹಳ್ಳಿ ನಂಜೇಗೌಡರು ಮತ್ತು ನಮ್ಮ ಗ್ರಾಮದವರು ಮತ್ತೊಮ್ಮೆ ಪಂಚಾಯ್ತಿ ಸೇರಿ ಪಂಚಾಯ್ತಿದಾರರ ತಿರ್ಮಾನದಂತೆ ನಾನು ನಿ.ಪಿ.1 ನ್ನು ಪಿರ್ಯಾದುದಾರರಿಗೆ ನೀಡಿರುತ್ತೇನೆಂದರೆ ಸರಿಯಲ್ಲ. ದಿಃ01.09.2021 ರ ಪಂಚಾಯ್ತಿ ತೀರ್ಮಾನದಂತೆ ಪಿರ್ಯದುದಾರರು ದೊಡ್ಡಬಳ್ಳಾಪುರ ನ್ಯಾಯಾಲಯದಲ್ಲಿ ಸಲ್ಲಿಸಿದ ಪಿರ್ಯಾದು ಸಂಃ129/2018 ವಾಪಸ್ಸು ಪಡೆದಿರುತ್ತಾರೆಂದರೆ ಸರಿಯಲ್ಲ. ಪಿರ್ಯಾದುದಾರರು ಸಲ್ಲಿಸಿದ ಪಿ ಸಿ ಆರ್ ಸಂಃ129/2018 ನ್ನು ವಾಪಸ್ಸು ತೆಗೆದುಕೊಂಡರೆ ನಿ.ಪಿ.1 ನ್ನು ನೀಡುತ್ತೇನೆಂದು ಪಂಚಾಯ್ತಿಯಲ್ಲಿ ಹೇಳಿದೆ ಎಂದರೆ ಸರಿಯಲ್ಲ. ಆದ್ದರಿಂದ ಪಿ ಸಿ ಆರ್ ನಂ.129/2018 ನ್ನು ನಿ.ಡಿ.3 ರಲ್ಲಿ ಆಗಿರುವ ಆದೇಶದಂತೆ ಪಿರ್ಯಾದುದಾರರು ಪಿರ್ಯಾದನ್ನು ಹಿಂಪಡೆದರು ಎಂದರೆ ಸರಿಯಲ್ಲ.

4. ನಿ.ಡಿ.5 ನ್ನು ಉಮೇಶ್ ರವರು ದಿಃ10.09.2012 ರಂದು ತಂದಿರುತ್ತಾರೆ. ಉಮೇಶ್ ರವರು ನಿ.ಡಿ.5 ಸ್ಟಾಂಪ್ ಪೇಪರನ್ನು ಎಲ್ಲಿಂದ, ಯಾವ ಸಮಯಕ್ಕೆ ತಂದರು ಎಂದು ನನಗೆ ಗೊತ್ತಿಲ್ಲ. ಉಮೇಶ್ ರವರ ಜೊತೆ ನಾನು ಹೋಗಿರುವುದಿಲ್ಲ. ಸ್ಟಾಂಪ್ ಪೇಪರ್ ಖರೀದಿಸುವಾಗ ಸದರಿ ಸ್ಟಾಂಪ್ ಪೇಪರ್ ಮೇಲೆ ಮೊದಲ ಪಾರ್ಟಿ ಮತ್ತು 2 ನೇ ಪಾರ್ಟಿ ಹೆಸರು ಬರೆಯಲಾಗುತ್ತದೆಂದರೆ ಸರಿ. ಮುಚ್ಚಳಿಕೆ ಪತ್ರಕ್ಕೆ ಉಮೇಶ್ ರವರು ಮೊದಲ ಪಾರ್ಟಿ ಮತ್ತು ನಾನು 2 ನೇ ಪಾರ್ಟಿ ಆಗಬೇಕು ಎಂದರೆ ಸರಿ. ನಿ.ಡಿ.5 ನ್ನು ದಿಃ11.09.2012 ರಂದು

ಬರೆಯಲಾಯಿತು. ನಿ.ಡಿ.5 ಕ್ಕೆ ಉಮೇಶ್, ನಾನು ಮತ್ತು ಸಾಕ್ಷಿಗಳು ಸಹಿ ಮಾಡಿರುತ್ತಾರೆ. ನಿ.ಡಿ.5 ನ್ನು ಸಿದ್ದಲಿಂಗಪ್ಪ ಎಂಬುವವರು ತಯಾರಿಸಿರುತ್ತಾರೆ.

5. ನಾನು ಬ್ಯಾಂಕಿಗೆ ಹಣ ಪಾವತಿ ಮಾಡದಂತೆ ಕೋರಿ ಬ್ಯಾಂಕ್ ಗೆ ಅರ್ಜಿಯನ್ನು ನೀಡಿರುತ್ತೇನೆಂದರೆ ಸರಿ. ಸದರಿ ಅರ್ಜಿಯನ್ನು ನಿ.ಡಿ.5 ಮುಚ್ಚಳಿಕೆ ಪತ್ರ ಆದ 3-4 ದಿನಗಳ ನಂತರ ನೀಡಿರುತ್ತೇನೆ. ನಿ.ಡಿ.6 ರಲ್ಲಿ ನಿ.ಡಿ.6 ನ್ನು ನೀಡಿದ ದಿನಾಂಕವನ್ನು ನಮೂದಿಸಿಲ್ಲ ಎಂದರೆ ಗೊತ್ತಿಲ್ಲ. ನಿ.ಡಿ.6 ಕ್ಕೆ ಸಂಬಂಧಿಸಿದ ದಾಖಲೆಗಳನ್ನು ಬ್ಯಾಂಕ್ ನಿಂದ ಸಮನ್ಸ್ ಮಾಡಿ ತರಿಸಿಕೊಳ್ಳಲು ನನ್ನ ಯಾವುದೇ ತಕರಾರು ಇರುವುದಿಲ್ಲ.

6. ಉಮೇಶ್ ಮೆಳೆಕೋಟೆ ಗ್ರಾಮದವರಾಗಿದ್ದು, ಅವರ ತಂದೆ ಹೆಸರು ವೆಂಕಟೇಶ್. ಉಮೇಶ್ ಮತ್ತು ಪಿರ್ಯಾದುದಾರರು ಸುಮಾರು 10-15 ವರ್ಷಗಳಿಂದ ದೇವನಹಳ್ಳಿಯಲ್ಲಿ ಆಫೀಸ್ ಮಾಡಿರುತ್ತಾರೆ. ನಾನು ಉಮೇಶ್ ರವರ ಊರಿನಲ್ಲಿ ಒಂದು ಲಕ್ಷ ಸಾಲವನ್ನು ಉಮೇಶ್ ರವರಿಂದ ಪಡೆದಿರುತ್ತೇನೆ. ಉಮೇಶ್ ರವರೊಂದಿಗೆ ನಾನು ಪಿರ್ಯಾದುದಾರರನ್ನು 02 ಬಾರಿ ನೋಡಿರುತ್ತೇನೆ. ನಾನು ನಿ.ಪಿ.1 ನೀಡುವ 04 ವರ್ಷಗಳ ಹಿಂದೆ ಪಿರ್ಯಾದುದಾರರನು ನೋಡಿರುತ್ತೇನೆ. ನಾನು ಪಿರ್ಯಾದುದಾರರ ಜೊತೆ ಮಾತನಾಡಿರುವುದಿಲ್ಲ, ಉಮೇಶ್ ರವರ ಜೊತೆ ನೋಡಿರುತ್ತೇನೆ. ನಿ.ಪಿ.5 ಅಂಚೆ ಲಕೋಟೆಯಲ್ಲಿರುವ ವಿಳಾಸ ನನ್ನದಾಗಿದ್ದು, ಸರಿ ಇರುತ್ತದೆ. ಪೋಸ್ ಮಾಸ್ಟರ್ ನನಗೆ ಕರೆ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಕರೆಯನು ಸ್ವೀಕರಿಸಿ ನೋಟೀಸ್ ಪಡೆಯದೇ ಇದ್ದುದರಿಂದ ಗೈರು ಹಾಜರು ಎಂದು ನೋಟೀಸ್ ವಾಪಸ್ಸು ಕಳುಹಿಸಿರುತ್ತಾರೆಂದರೆ ಸರಿಯಲ್ಲ. ನಾನು ಉದ್ದೇಶ ಪೂರ್ವಕವಾಗಿ ನೋಟೀಸ್ ಪಡೆಯದೇ ವಾಪಸ್ಸು ಕಳುಹಿಸಿರುತ್ತೇನೆಂದರೆ ಸರಿಯಲ್ಲ.

7. ನಿ.ಪಿ.1 ಚೆಕ್ ಕಳೆದು ಹೋದ ಬಗ್ಗೆ ನಾನು ದೂರು ನೀಡಿರುವುದಿಲ್ಲ. ಪಿರ್ಯದುದಾರರು, ಉಮೇಶ್ ಮತ್ತು ವೆಂಕಟೇಶ್ ರವರ ಮೂಲಕ ಮಾತುಕತೆ ಮಾಡಿರುವುದಿಲ್ಲ. ಉಮೇಶ್ ಮತ್ತು ವೆಂಕಟೇಶ್ ರವರು ಯಾರೆಂದು ಪಿರ್ಯಾದುದಾರರಿಗೆ ಗೊತ್ತಿರುವುದಿಲ್ಲ, ನಿ.ಡಿ.5 ನ್ನು ನಾನು ಸೃಷ್ಟಿ

ಮಾಡಿರುತ್ತೇನೆಂದರೆ ಸರಿಯಲ್ಲ. ಪಿರ್ಯಾದುದಾರರು ಈ ಪ್ರಕರಣವನ್ನು ದಾಖಲಿಸಿದ ನಂತರ, ನಿ.ಡಿ.5 ನ್ನು ನಾನು ಮತ್ತು ಉಮೇಶ್ ರವರು ಸೃಷ್ಟಿಸಿರುತ್ತೇವೆಂದರೆ ಸರಿಯಲ್ಲ. ದಿಃ18.08.2016 ರ ಅಸಲು ಕ್ರಯದ ಕರಾರು ಪತ್ರ ಪಂಚಾಯ್ತಿದಾರರಾದ ನಂಜೇಗೌಡರು ಮತ್ತು ನಮ್ಮ ಗ್ರಾಮದವರ ಬಳಿ ಇರುತ್ತದೆಂದರೆ ಸರಿಯಲ್ಲ. ದಿಃ01.09.2021 ರಂದು ಪಿರ್ಯಾದುದಾರಾರಿಗೆ ಸದರಿ ಕ್ರಯದ ಕರಾರಿನ ನಕಲನ್ನು ನೀಡಿದರು ಎಂದರೆ ಸರಿಯಲ್ಲ . ದಿಃ18.08.2016 ರ ಮುಂಗಡ ಹಣ ಮತ್ತು ಸದರಿ ಮುಂಗಡ ಹಣಕ್ಕೆ ಹೆಚ್ಚುವರಿಯಾಗಿ 05 ಲಕ್ಷ ಸೇರಿಸಿ ಪಿರ್ಯಾದುದಾರರಿಗೆ ನೀಡುವಂತ ಪಂಚಾಯ್ತಿಯಲ್ಲಿ ಆದ ತೀರ್ಮಾನದಂತೆ, ನಾನು ನಿ.ಪಿ.1 ಚೆಕ್ಕನ್ನು ಪಿರ್ಯಾದುದಾರರಿಗೆ ನೀಡಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

8. ಸಾಕ್ಷಿಗೆ ದಿಃ08.07.2022 ರ ಎನ್ ಐ ಆಕ್ಟ್ ಕಲಂ 142(2) ರ ಅರ್ಜಿಯಲ್ಲಿನ ಸಹಿಯನ್ನು ತೋರಿಸಲಾಗಿ, ಸದರಿ ಸಹಿ ನನ್ನದಲ್ಲ ಎಂದು ನುಡಿಯುತ್ತಾರೆ. ವಕಾಲತ್ತಿನಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ವ್ಯವಸಾಯ ಮಾಡುತ್ತೇನೆ. ನಾನು ವಕೀಲರ ಕಛೇರಿಯಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತೇನೆಂದರೆ ಸರಿಯಲ್ಲ. ನನಗೆ ನ್ಯಾಯಾಲಯದ ಕಲಾಪಗಳು ಗೊತ್ತು ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಲಾಗಿ ನೀಡಲಾಯಿತು.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.
ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.